

# ಜನಮನರಂಗ ಮೈಸೂರು

ಯದುವಂಶದ ಸಮಗ್ರ ಇತಿಹಾಸ - ಸಮಗ್ರ ಅಭಿವೃದ್ಧಿ

**ಕನ್ನಡ ಪಾಕ್ಷಿಕ ಪತ್ರಿಕೆ**

16-10-2015



Mob: 9620752999, 9379777793
E-mail:jmrmysuru@yahoo.com



ಸಂಪುಟ 1 ಸಂಚಿಕೆ 1
Volume 1 Issue 1

ಸಿ.ಪಿ. ತಮ್ಮಣ್ಣ
ಪ್ರಕಾಶಕರು

ಈಚನೂರು ಕುಮಾರ್
ಗೌರವ ಸಂಪಾದಕರು

ಹೆಚ್.ವಿ. ಸುಬ್ಬರಾವ್
ಸಂಪಾದಕರು

ಎಸ್.ಸಿ ಸುಮನ್
ಉಪಸಂಪಾದಕರು

ಪುಟ 2
ಬೆಲೆ ₹ 5


## ಚಾಮುಂಡಿಬೆಟ್ಟ - ತಪ್ಪಲು ಸರ್ವಾಂಗೀಣ ಅಭಿವೃದ್ಧಿ ಹೀಗಾಗಬೇಕು











ಚಾಮುಂಡಿಬೆಟ್ಟವು ಇರುವುದರಿಂದಲೇ ಮೈಸೂರಿಗೆ ಒಂದು ಹೆಸರು, ಹಿರಿಮೆ ಮತ್ತು ಗರಿಮೆ. ಚಾಮುಂಡಿಬೆಟ್ಟವು ಮೈಸೂರು ಅರಮನೆಗೆ ಹಿನ್ನೆಲೆ. ಇದು ಪೌರಾಣಿಕ ಮತ್ತು ಐತಿಹಾಸಿಕ ಹಾಗೂ ಸಾಂಸ್ಕೃತಿಕವಾಗಿ ಧಾರ್ಮಿಕವಾಗಿ, ಜಗತ್‌ಪ್ರಸಿದ್ಧ. ಅಲ್ಲದೆ ಕರ್ನಾಟಕದ, ಕನ್ನಡ ನಾಡಿನ ಅಧಿದೇವತೆ ಎಂಬ ಒಂದು ಸ್ಥಾನಮಾನ ಇಡೀ ಭಾರತದೇಶದಲ್ಲಿ ಸಿಕ್ಕಿರುವುದೇ ನಮ್ಮ ಚಾಮುಂಡೇಶ್ವರಿಗೆ ಮಾತ್ರ ಎಂಬುದು ಇಲ್ಲಿ ಗಮನಾರ್ಹ.ಕ್ರಿ.ಶ. 1399 ರಿಂದಲೂ ಈ ನಾಡನ್ನು ಆಳಿದ ಒಡೆಯರ್ ರಾಜ ಮನೆತನಕ್ಕೂ ಸಕಲ ಜನಾಂಗದವರಿಗೂ ಮನೆದೇವತೆ, ಕುಲದೇವತೆ, ಮಾತೆಯಾಗಿ



ಮೂರನೇ ಕೃಷ್ಣರಾಜ ಒಡೆಯರ್



ಹತ್ತನೇ ಚಾಮರಾಜೇಂದ್ರ ಒಡೆಯರ್



ನಾಲ್ವಡಿ ಕೃಷ್ಣರಾಜ ಒಡೆಯರ್



ಜಯಚಾಮರಾಜೇಂದ್ರ ಒಡೆಯರ್

ಪೂಜಿಸುವ, ಭಕ್ತಿಯಿಂದ ಹಾಡುವ, ಉತ್ಸವ ಮಾಡುವ ಶಕ್ತಿಕೇಂದ್ರವೂ ಇದಾಗಿದೆ.

ಇಂಥದ್ದೊಂದು ಪ್ರಾಚೀನ ಹಾಗೂ ಭೂಕಂಪನ ಮುಕ್ತವಲಯದ ಚಾಮುಂಡಿ ಬೆಟ್ಟ ಸಾವಿರ ಎಕರೆ ಪ್ರದೇಶವನ್ನು ಒಳಗೊಂಡಿದೆ. ಜೊತೆಗೆ ಜನವಸತಿ ಇರುವ ಊರೊಂದು ಬೆಟ್ಟದ ಮೇಲಿದೆ. ಇಂತಹ ಬೆಟ್ಟಕ್ಕೆ ರಾಜಮಹಾರಾಜರ, ದಿವಾನರುಗಳ, ಕೆಲವು ಇಂಗ್ಲಿಷ್ ಅಧಿಕಾರಿಗಳ ಪರಿಶ್ರಮ ದಿಂದ ಸುಂದರವಾದ ಬೆಟ್ಟವಾಗಿದೆ. ಒಂದು ಕಾಲದಲ್ಲಿ ಅಭಿವೃದ್ಧಿಯೂ ಆಗಿತ್ತು ಈಗ ಆ ಲಕ್ಷಣಗಳು ಇಲ್ಲವಾಗಿವೆ.

ಈ ಹಿನ್ನೆಲೆಯಲ್ಲಿ ಚಾಮುಂಡಿಬೆಟ್ಟದ ಮತ್ತು ತಪ್ಪಲಿನ ಪ್ರದೇಶ ಸರ್ವಾಂಗೀಣ ಅಭಿವೃದ್ಧಿಯಾಗಬೇಕೆಂಬುದು ನಮ್ಮದೊಂದು ಪ್ರಸ್ತಾವನೆ ಇದಾಗಿದೆ. ಇದನ್ನು ಮನವಿ, ಹಕ್ಕೊತ್ತಾಯ ಅಥವಾ ನೀಲಿನಕ್ಷೆ ಎಂದಾದರೂ ಅಂದುಕೊಳ್ಳಬಹುದು.

ಚಾಮುಂಡಿಬೆಟ್ಟ ಮತ್ತು ತಪ್ಪಲು ವಿಶ್ವ ಪ್ರವಾಸಿಗರನ್ನು ಆಕರ್ಷಿಸುವಂತೆ ರಚಿಸಬೇಕಾಗಿದೆ. ನಿಸರ್ಗ ನೀಡಿರುವ ಈ ಬೆಟ್ಟವನ್ನು ಎಲ್ಲಾ ವಿಧದಿಂದಲೂ ಸುಧಾರಿಸಿಕೊಳ್ಳಬೇಕು. ಬೆಟ್ಟದ ಮೇಲಿನ ಸ್ಥಳವನ್ನು ಜನವಸತಿಯೊಂದಿಗೆ ಪೂರ್ಣವಾಗಿ ನಿಗದಿಗೊಳಿಸಬೇಕು. ಅಲ್ಲಿಗೆ ಜನರಿಗೆ ಸೌಕರ್ಯಗಳಾದ ಸರಕಾರಿ ಆಸ್ಪತ್ರೆ, ಉತ್ತಮ ಶಾಲೆ, ಉತ್ತಮ ಕಸುಬಿನ ತರಬೇತಿ ಕೇಂದ್ರ, ಹೆಣ್ಣು ಮಕ್ಕಳ ಶಾಲಾಭಿವೃದ್ಧಿ, ಸೌಕರ್ಯದ ಊರು ಎಂಬ ಸ್ಮಾರ್ಟ್ (ಸುಸಜ್ಜಿತ ಊರು) ಕಲ್ಪಿಸಬೇಕಾಗಿದೆ. ಬೆಟ್ಟದ ಮೇಲೆ ಮತ್ತು ತಪ್ಪಲಿ ನಲ್ಲಿರುವ ಹಳ್ಳ, ಕೊಳ್ಳ, ಕೊಳ, ಕೆರೆಗಳನ್ನು ಯಥಾವತ್ತಾಗಿ ಇಟ್ಟು ಎಲ್ಲಾ ಋತುಮಾನದಲ್ಲೂ ನೀರು ಅಥವಾ ಜನಸಂಗ್ರಹ ಇರುವಂತೆ ನೋಡಿಕೊಳ್ಳಬೇಕು. ಹಾಲಿ ಇರುವ ಕಾಡಿನೊಂದಿಗೆ ಆಯುರ್ವೇದ ಮತ್ತು ಅರಣ್ಯ ಇಲಾಖೆ ಪಟ್ಟಿ ಮಾಡಿರುವ ಗಿಡ ಮೂಲಿಕಾ, ಔಷಧ ಮೂಲಿಕಾಸಸ್ಯ ಸಂಕುಲವನ್ನು ಮಾತ್ರ ಬೆಳೆಸಬೇಕಾಗಿದೆ.

ಸಾಕುಪ್ರಾಣಿಗಳು, ಸಾಧುಪ್ರಾಣಿಗಳ ಒಟ್ಟು ಪಶುಪಕ್ಷಿಗಳನ್ನು ಉದಾ ಹರಣೆಗೆ ಮೊಲದ ಉದ್ಯಾನ, ನವಿಲಿನ ಉದ್ಯಾನ, ಜಿಂಕೆಯ ಉದ್ಯಾನ, ಅಮೃತಮಹಲ್ ಹಸುಗಳ ಪಾರ್ಕು ಇತ್ಯಾದಿ ನಿರ್ಮಿಸಬೇಕಾಗಿದೆ. ಯಾವುದೇ ರೀತಿಯ ಕ್ರೂರಪ್ರಾಣಿಗಳು ಇರಬಾರದು, ಬರಬಾರದು. ಪಕ್ಷಿಗಳು ತಿನ್ನುವ ಹಣ್ಣು ಹಂಪಲನ್ನು ಬೆಳೆಸಿ ತೋಟಗಳನ್ನು ಮಾಡಬೇಕು.

ಈ ಎಲ್ಲ ತೋಟ, ವನ, ಉದ್ಯಾನ ಗಳು ಸಹಜವಾಗಿ ಆಗಬೇಕು. ಯಾವುದೇ ಯಂತ್ರಗಳು, ತಾಂತ್ರಿಕತೆ ಬಾರದಂತೆ ನೋಡಿಕೊಳ್ಳಬೇಕು.

ಬೆಟ್ಟದ ಬುಡದಲ್ಲಿ ಹಿಂದಿನ ಕಾಲ ದಿಂದಲೂ ಇರುವ ನಿಸರ್ಗ ಅಥವಾ ಮಾನವ ನಿರ್ಮಿತ ಗುಹೆಗಳನ್ನು ಜೋಪಾನವಾಗಿ ಕಾಯ್ದಿಡಲೇಬೇಕು. ಸಣ್ಣ ಪುಟ್ಟ ಗುಡಿಗಳನ್ನು ದುರಸ್ತಿ ಮಾಡಬೇಕು. ಆಧುನಿಕಗೊಳಿಸಬಾರದು. ಹೇಗಿದೆಯೋ ಹಾಗೆಯೇ ಗಟ್ಟಿಮುಟ್ಟಿಯಾಗಿರಲಿ.

ಇನ್ನು ಚಾಮುಂಡಿಬೆಟ್ಟದ ಮೇಲೇರಲು ದೊಡ್ಡದೇವರಾಜರು ಹಾಕಿಸಿರುವ ಸಾವಿರ ಮೆಟ್ಟಿಲುಗಳು ಒಂದೇ ಅಳತೆಯಲ್ಲಿ ನಯವಾಗಿ ಇಲ್ಲ. ಹತ್ತಲು ಕಷ್ಟವಾಗಿ ಉಸಿರು ಬಿಡಬೇಕಾಗಿದೆ. ಈ ಮೆಟ್ಟಿಲುಗಳನ್ನು 8 ಅಡಿ ಅಗಲ, 6 ಇಂಚು ಎತ್ತರವಾಗಿ 1 ಅಡಿ ಪಾದ ಅಳತೆ ಇರುವಂತೆ ನಯವಾಗಿ ಡ್ರೆಸ್ಸಿಂಗ್ ಮಾಡಿಸಬೇಕು. 200 ಮೆಟ್ಟಿಲುಗಳು ಆಗುತ್ತಿದ್ದಂತೆ ಶೌಚಾಲಯ, ಆರಾಮ ಬೆಂಚು, ಆಶ್ರಯ, ತಂಗುದಾಣ, ಕುಡಿಯುವ ನೀರು, ಸೋಲಾರ್ ದೀಪಗಳ ವ್ಯವಸ್ಥೆ ಇರಬೇಕು. ವಿದ್ಯುತ್ ಮಾರ್ಗಗಳು ಭೂಮಿಯ ಒಳಗೆ ಇರುವಂತೆ ವ್ಯವಸ್ಥೆಯಾಗಬೇಕು. ಅಂಗಡಿ ಮುಂಗಟ್ಟುಗಳ ನಿರ್ಮಾಣ ಯಾವುದೇ ಕಾರಣಕ್ಕೂ ಆಗಬಾರದು.

ಬೆಟ್ಟದ ಪಾದದ ಬಳಿ ಅರಮನೆ ಜಯ ಮಾರ್ತಾಂಡ ಮಹಾದ್ವಾರದ ಮಾದರಿ ಕಲಾತ್ಮಕ ಕಮಾನು ದ್ವಾರ ನಿರ್ಮಿಸಬೇಕು. ಇದೇ ರೀತಿ ತಾವರೆಕಟ್ಟೆ ಬಳಿ ಪ್ರವೇಶದ್ವಾರವೂ ಇದೇ ಮಾದರಿಯಾಗಲಿ. ಪಾದದ ಬಳಿ ದೂರದಲ್ಲಿ ಎಲ್ಲಾ ವಿಧದ

ವಾಹನಗಳ ಪಾರ್ಕಿಂಗ್‌ಗಳು ಆಧುನಿಕ ವಾಗಿರಬೇಕು. ಕಾಯಂ ಆಗಿರಬೇಕು. 100 ಅಡಿ ಅಳತೆಯಲ್ಲಿ ಬೆಟ್ಟದ ಸುತ್ತಲೂ ಒಂದು ರಿಂಗ್‌ರೋಡು ಇರಬೇಕು. ಸುತ್ತಲೂ ದೋಣಿ ವಿಹಾರ ಸಾಧ್ಯತೆ ಹುಡುಕಿ ಕಬಿನಿ ನೀರನ್ನು ಬಳಸಿಕೊಳ್ಳಬೇಕು. ಅದರಿಂದ ಪ್ರವಾಸಿಗರಿಂದ ವರಮಾನ ಬರುವಂತೆ



ಮಾಡಬೇಕು. ಲಲಿತಾದ್ರಿ ಗೆಸ್ಟ್‌ಹೌಸ್‌ಅನ್ನು ಸರಕಾರ ವಾಪಸು ತೆಗೆದುಕೊಂಡು ಅದನ್ನು ಪಾರಂಪರಿಕ ಕಟ್ಟಡವಾಗಿ ಉಳಿಸಿಕೊಂಡು ಆದಾಯ ಬರುವಂತೆ ಪ್ರವಾಸಿಗರನ್ನು ಯಾವು ದಾದರೂ ರೀತಿಯಲ್ಲಿ ಆಕರ್ಷಿಸಬೇಕು. ಕುರುಬಾರ ಹಳ್ಳಿಯಿಂದ ಚಾಮುಂಡಿ ಬೆಟ್ಟದವರೆಗೆ ಕಾಂಕ್ರೀಟು ರಸ್ತೆ ಮಾಡಬೇಕು. ಆ ರಸ್ತೆಯನ್ನು ಅಗಲೀಕರಣ ಮಾಡಬೇಕು. ಒಳ್ಳೆಯ ದೀಪದ ವ್ಯವಸ್ಥೆ ಅಲ್ಲಿಗೆ ಹೋಗಿಬರುವವರು ಅಲ್ಲಲ್ಲಿ ಕುಳಿತು ಉಪಾಹಾರ, ತಿಂಡಿ, ತಿನಿಸು, ಮಾಡಿಕೊಳ್ಳು ವಂತೆ ಅಲಂಕಾರಿಕ- ಕಲಾತ್ಮಕ ಮಂಟಪ ಗಳನ್ನು ನಿರ್ಮಿಸಲೇಬೇಕು. ಬೆಟ್ಟದ ಮೇಲೆ ರಸ್ತೆ ಮಧ್ಯೆ ಇರುವ ಐಲ್ಯಾಂಡ್‌ನ್ನು ಅದೇ ರೀತಿ ಸುಧಾರಿಸ ಬೇಕು. ಅದರ ತುದಿಯಲ್ಲಿ ಪ್ರವಾಸಿಗರು ನಿಂತು ಮೈಸೂರಿನತ್ತ ದೃಷ್ಟಿ ಹಾಯಿಸುವಂತೆ ಆಧುನಿಕ ಉಪಕರಣ ಇಡಬೇಕು. ಮಹಿಷಾಸುರ ಇರುವ ಸ್ಥಳದಲ್ಲಿ ಸೌಂಡ್ ಅಂಡ್ ಮ್ಯೂಸಿಕ್ ಮೂಲಕ ಪೌರಾಣಿಕ ಕತೆಯನ್ನು ಹಿಂದಿ, ಇಂಗ್ಲಿಷ್, ಕನ್ನಡದಲ್ಲಿ ಮಾತ್ರ ಲೇಸರ್ ಬೆಳಕಿನಲ್ಲಿ ತೋರಿಸಿ ಆದಾಯ ತುಂಬಿಕೊಳ್ಳಬೇಕು.

ಈ ಪ್ರಸ್ತಾವನೆಯಲ್ಲಿ ತಿಳಿಸಿರುವಂತೆ ಯೋಜನೆ ಆಗಲು ಅರಣ್ಯ ಇಲಾಖೆ, ಪ್ರವಾಸೋದ್ಯಮ ಇಲಾಖೆ, ಮುಜರಾಯಿ ಇಲಾಖೆ, ಸ್ಥಳೀಯ ಸಂಸ್ಥೆ, ನಗರ ಪಾಲಿಕೆ, ಲೋಕೋಪಯೋಗಿ ಇಲಾಖೆ ಮತ್ತು ಜಿಲ್ಲಾ ಆಡಳಿತ ಸಹಿತ ಸಮಿತಿಯೊಂದನ್ನು ಶಾಸನಬದ್ಧವಾಗಿ ರಚಿಸಿ ನಿಗದಿತ ಸಮಯದೊಳಗೆ ಮುಗಿಸುಂತೆ ಟಾಸ್ಕ್ ಫೋರ್ಸ್ ರಚಿಸಿ ಯೋಜನೆಯನ್ನು ಮುಗಿಸಿ ಆರ್ಥಿಕ ಜವಾಬ್ದಾರಿಯನ್ನು ಆರ್ಥಿಕ ಪ್ರಾವಿತ್ರತೆ ಕಾಪಾಡಿಕೊಂಡು ವಿಶ್ವ ಪ್ರವಾಸಿಗರು ಬಂದು ವರಮಾನ ಗಳಿಸುವಂತೆ ಮುಖ್ಯ ಮಾಡಬೇಕೆಂಬುದೇ ನಮ್ಮೆಲ್ಲರ ಆಶಯ.

**ವಂದನೆಗಳೊಡನೆ,**

**ಸಿ.ಪಿ. ತಮ್ಮಣ್ಣ, ಅಧ್ಯಕ್ಷರು,**

ಜನಮನ ರಂಗ, ಮೈಸೂರು ಪದಾಧಿಕಾರಿಗಳು





# ಜನಮನರಂಗ ಮೈಸೂರು

ಮೈಸೂರು ಒಡೆಯರುಗಳ ತವರುಮನೆ. ನಮ್ಮ ನಾಡಿನ ಒಂದು ಕಾಲದ ರಾಜಧಾನಿಯೂ ಹೌದು. ವಿದ್ಯಾನಗರಿ, ಸಾಂಸ್ಕೃತಿಕ ನಗರಿಯೂ ನಿಜ. ಹೀಗಿರುವಾಗ ಒಡೆಯರುಗಳು ನಾಡಿಗೆ ನೀಡಿದ ಬಳುವಳಿ ಹಾಗೂ ಮೈಸೂರು ನಗರ ಮತ್ತು ತಾಲೂಕಿನ ಇತಿಹಾಸದ ಬಗ್ಗೆ ಎಲ್ಲರಿಗೂ ಗೌರವ - ಪ್ರೀತಿ ಇರುವಂತೆ ನನಗೂ ಇದೆ. ಇಷ್ಟಕ್ಕೂ ನಮ್ಮೂರು ಮತ್ತು ಸುತ್ತಮುತ್ತ ಹಳ್ಳಿಗಳು ಅರಮನೆ ಮತ್ತು ರಾಜರುಗಳ ಬಗ್ಗೆ ಅಪಾರ ಶ್ರದ್ಧೆ ತೋರಿಸುವುದು ನನ್ನ ಭಾವನೆಯನ್ನು ಅರಳಿಸಿತು. ಈ ಬಗ್ಗೆ ಸುದೀರ್ಘವಾಗಿ ಇವತ್ತಿನ ಪೀಳಿಗೆಗೆ ಹಾಗೂ ಅರಮನೆಯ ಹೆಮ್ಮೆಯನ್ನು ಕಂಡ ಹಿರಿಯರು ಮತ್ತೊಮ್ಮೆ ನೆನಪಿಸಿಕೊಳ್ಳಲು ಒಂದು ಓದುವ ಮಾಧ್ಯಮ ಬೇಕೆನಿಸಿತು. ಈ ಹಿನ್ನೆಲೆಯಲ್ಲಿ ನನಗೆ ಚಿರಪರಿಚಿತ ರಾಗಿರುವ ಹತ್ತಾರು ಸಾಹಿತಿಗಳು, ಲೇಖಕರೊಂದಿಗೆ ಚರ್ಚಿಸಿದೆ. ನನ್ನ ಅಭಿಪ್ರಾಯ ಹಂಚಿಕೊಂಡೆ. ಅವರೂ ನೈತಿಕ ಹಾಗೂ ಪ್ರೀತಿಯ ಬೆಂಬಲ ನೀಡಿ ಭಾವನಾತ್ಮಕ ಸಂಬಂಧವನ್ನು ಗಟ್ಟಿ ಗೊಳಿಸಿದರು. ಇವತ್ತಿನ ಪುರುಸೊತ್ತಿಲ್ಲದ ಬದುಕಿನಲ್ಲಿ ಪ್ರೀತಿಯ ಪಾರಂಪರಿಕ ಪ್ರೇಮಿಗಳು ಗಮನಹರಿಸಿ ನೋಡುವಂಥ ಚಿಕ್ಕದೊಂದು ಪಾಕ್ಷಿಕ ಪತ್ರಿಕೆಯನ್ನು ಪ್ರಕಟಿಸಬೇಕೆಂದು 'ಜನ ಮನ ರಂಗ ಮೈಸೂರು' ಎಂಬ ಹೆಸರಿನಲ್ಲಿ ಪ್ರಕಟಿಸುವ ಸಂಕಲ್ಪ ಮಾಡಿ ಕಾರ್ಯನಿರತನಾಗಿದ್ದೇನೆ. ನನ್ನ ಈ ಭಾವನೆಗೆ ಲೇಖಕ ಸ್ನೇಹಿತರೂ ಮುದ್ರಣ ಸ್ನೇಹಿತರೂ ಸ್ಪಂದಿಸಿದ್ದಾರೆ. ಇಂತಹ ಸಮಗ್ರ ಇತಿಹಾಸ- ಸಮಗ್ರ ಅಭಿವೃದ್ಧಿ ಕಾರ್ಯ್ಯೊಕೊಳ್ಳಲು ನೀವೂ ಜಾಹಿರಾತು ರಾಜರ- ಸಾಧುಸಂತರ ಸುಧಾರಕರ ನಿಷ್ಠರಾಗಿ ಆಗಿಹೋದ ಅಧಿಕಾರಿಗಳನ್ನು ಅವರ ಕಾರ್ಯಗಳನ್ನು ತಿಳಿ ತಿಳಿಯಾಗಿ ತಿಳಿಯೋಣ.

**ಸಿ.ಪಿ. ತಮ್ಮಣ್ಣ**

# ರಾಜ್ಯ ಸರ್ಕಾರದ ಅಂಗಳಕ್ಕೆ ಭೂ ಸ್ವಾಧೀನ ಕಾಯ್ದೆ

ಕೋಟ್ಯಂತರ ಜನರ ಬದುಕು ಮತ್ತು ಜೀವನೋಪಾಯದ ಮೇಲೆ ಪರಿಣಾಮ ಬೀರುವ ಭೂ ಸ್ವಾಧೀನಕ್ಕೆ ಸಂಬಂಧಿಸಿದ ಕಾಯ್ದೆ ಕಳೆದ ಕೆಲವು ವರ್ಷಗಳಿಂದ ರಾಜಕೀಯ. ವಲಯದಲ್ಲಿ ಚರ್ಚೆಯ ಪ್ರಧಾನ ವಿಷಯವಾಗಿ ಮುನ್ನೆಲೆಯಲ್ಲಿದೆ. ವಸಾಹತುಶಾಹಿ ಕಾಲದ, ಈಗಿನ ಕಾಲ ಮಾನಕ್ಕೆ ಹೊಂದಿಕೊಳ್ಳದ, ಕಾಯ್ದೆಯೇ 2013ರ ವರೆಗೂ ನಮ್ಮಲ್ಲಿ ಜಾರಿಯಲ್ಲಿ ಇತ್ತು. ಅದನ್ನು ಬದಲಿಸಬೇಕೆಂದು ಒತ್ತಾಯಿಸಿ ಹೋರಾಟಗಳು ನಡೆದಿದ್ದ ವಾದರೂ, ಆ ಕೂಗಿಗೆ ಆಳುವ ಪಕ್ಷಗಳು ಸಕಾರಾತ್ಮಕವಾಗಿ ಸ್ಪಂದಿಸುವ ಇಚ್ಛಾಶಕ್ತಿ ತೋರಿರಲಿಲ್ಲ. ಕೊನೆಗೆ ಯುಪಿಎ ಸರ್ಕಾರದ ಅವಧಿಯಲ್ಲಿ, 1894ರ ಭೂಸ್ವಾಧೀನ ಕಾಯ್ದೆಗೆ ಬದಲಾಗಿ ಹೊಸದೊಂದು ಕಾಯ್ದೆ ರೂಪುಗೊಂಡು ಸಂಸತ್ತಿನ ಅನುಮೋದನೆ ಪಡೆಯಿತು. ವಿಪರ್ಯಾಸದ ಸಂಗತಿಯೆಂದರೆ ಆಳುವ ಕೂಟ ಬದಲಾದ ಕಾರಣ ಸರ್ಕಾರದ ಧೋರಣೆಗಳೂ ಬದಲಾದವು. ಮಹತ್ವದ ಈ ಕಾಯ್ದೆ ನಿಕಷಕ್ಕೆ ಒಳಪಡುವ ಮೊದಲೇ ಸುಗ್ರೀವಾಜ್ಞೆ ಮೂಲಕ ಪರಿಷ್ಕರಣೆ ಯುಕ್ತ ಮಾರ್ಗ ಅಲ್ಲವೇ ಅಲ್ಲ. ಅಲ್ಲದೆ ಈ ಕ್ರಮ ತಾತ್ಕಾಲಿಕವಾದುದು.ಆರು ತಿಂಗಳೊಳಗೆ ತಿದ್ದುಪಡಿಗೆ ಸಂಸತ್ತಿನ ಅನುಮೋದನೆ ಪಡೆಯಬೇಕು. ರಾಜ್ಯಸಭೆಯಲ್ಲಿ ವಿರೋಧ ಪಕ್ಷಗಳ ಸದಸ್ಯರು ಬಹುಸಂಖ್ಯೆಯಲ್ಲಿರುವ ಕಾರಣ ಈ ತಿದ್ದುಪಡಿಗೆ ಅನುಮತಿ ದೊರಕಿಸಿ ಕೊಡಲು ಎನ್‌ಡಿಎ ಸರ್ಕಾರ ಭೂ ಸ್ವಾಧೀನಕ್ಕೆ ಸಂಬಂಧಿಸಿದ ನಿಯಮಗಳನ್ನು ರೂಪಿಸುವ ಜವಾಬ್ದಾರಿಯನ್ನು ರಾಜ್ಯಗಳ ವಿವೇಚನೆಗೆ ಒಪ್ಪಿಸಲು ಒಲವು ತೋರಿದೆ. ಒಂದು ರೀತಿಯಲ್ಲಿ ಇದು ಸರಿಯಾದ ನಡೆಯೂ ಹೌದು.

ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಈ ಅವಕಾಶವನ್ನು ಈಗ ಸದ್ಬಳಕೆ ಮಾಡಿ ಕೊಂಡಿದೆ. ಕೇಂದ್ರದಲ್ಲಿ ತಮ್ಮ ಪಕ್ಷದ ನೇತೃತ್ವದ ಸರ್ಕಾರವೇ ಜಾರಿಗೊಳಿಸಿದ್ದ 2013ರ ಕಾಯ್ದೆಯನ್ನು ರಾಜ್ಯದಲ್ಲಿ ಅಳವಡಿಸಿಕೊಳ್ಳಲು ಮುಂದಾಗಿದೆ. ಇದಕ್ಕೆ ಸಂಬಂಧಿಸಿದಂತೆ ರೂಪಿಸಿರುವ ನಿಯಮ ಗಳಿಗೆ ರಾಜ್ಯ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ. ಈ ಕಾಯ್ದೆ ಕೃಷಿಕರನ್ನು ಅಸಹಾಯಕ ಸ್ಥಿತಿಯಿಂದ ಪಾರು ಮಾಡಿದೆ. ಅವರ ಧ್ವನಿ ಕಿಮ್ಮತ್ತು ತಂದಿದೆ. ಇದರ ಅನ್ವಯ ಯಾವುದೇ ಭೂ ಸ್ವಾಧೀನಕ್ಕೆ ಮುನ್ನ ಕನಿಷ್ಠ ಶೇಕಡ 70 ರಷ್ಟು ಭೂಮಿಯ ಮಾಲೀಕರ ಒಪ್ಪಿಗೆ ಪಡೆಯುವುದು, ಸಾಮಾಜಿಕ ಪರಿಣಾಮದ ಮೌಲ್ಯ ಮಾಪನ, ಪರಿಸರ ಮತ್ತು ಆಹಾರ ಅಭದ್ರತೆಯ ಮೇಲಾಗುವ ಪರಿಣಾಮಗಳ ಪರಾಮರ್ಶೆ ನಡೆಸುವುದು ಕಡ್ಡಾಯ. ಭೂಮಿ ಕಳೆದುಕೊಂಡಾಗ ಹೆಚ್ಚಿನ ಮೊತ್ತದ ಪರಿಹಾರ, ಮಾನವೀಯ ನೆಲೆಯಲ್ಲಿ ಪುನರ್ವಸತಿ ಕಲ್ಪಿಸಬೇಕೆಂಬ ನಿಬಂಧನೆ ಗಳನ್ನೂ ಇದು ಒಳಗೊಂಡಿದೆ. ಈ ನಿಯಮ ಗಳನ್ನು ಕಟ್ಟುನಿಟ್ಟಾಗಿ ಪಾಲಿಸಿದರೆ, ಭೂ ಕಳೆದುಕೊಳ್ಳುವ ರೈತರು ಕಣ್ಣೀರಲ್ಲಿ ಕೈ ತೊಳೆದು ತೊಳೆಯಬೇಕಾದ ಸ್ಥಿತಿ ಉಂಟಾಗುವುದಿಲ್ಲ. ಭೂ ಸ್ವಾಧೀನ ಪ್ರಕ್ರಿಯೆಯಲ್ಲಿನ ವಿಳಂಬದಿಂದ ಯೋಜನೆಗಳು ಸ್ಥಗಿತಗೊಂಡಿದ್ದರೆ ಅಂಥ ಯೋಜನೆಗಳಿಗೆ ಮರುಜೀವ ನೀಡಲು ಹಾಗೂ ಕುಂಟುತ್ತ ಸಾಗುವ ಕಾಮಗಾರಿಗಳಿಗೆ ಜೀವ ತುಂಬಲು ಈಗ ಅದರಿಂದ ಸಹಕಾರಿ ಆಗಬಹುದು. ದುಡಿಯುವ ಕೈಗಳಿಗೆ ಕೆಲಸ ಕೊಡಬೇಕು. ಅದಕ್ಕೆ ಉದ್ಯೋಗ ಅವಕಾಶಗಳನ್ನು ಸೃಷ್ಟಿಸಲೇಬೇಕು. ಅಂತೆಯೇ ರೈತರ ಹಿತಾಸಕ್ತಿಗೂ ಧಕ್ಕೆ ಬಾರದು. ಈ ಎರಡರ ನಡುವೆ ಸಮ ತೋಲನ ಕಾಯ್ದುಕೊಳ್ಳುವುದು ಈಗಿನ ಅಗತ್ಯ. ಇದರ ಜೊತೆಗೆ, ಮೂಲ ಸೌಕರ್ಯ, ಅಭಿವೃದ್ಧಿ ಅಥವಾ ಉದ್ಯಮ ಸ್ಥಾಪನೆ ಹೆಸರನ್ನು ಸರ್ಕಾರಿ ಸಂಸ್ಥೆಗಳ ಮೂಲಕ ಭೂ ಸ್ವಾಧೀನ ಮಾಡಿಸಿಕೊಂಡು ನಂತರ ಅನ್ಯ ಉದ್ದೇಶಕ್ಕೆ ಬಳಸುವ ಖಾಸಗಿ ಭೂದಾಹಿಗಳಿಗೂ ಕಡಿವಾಣ ಹಾಕುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಭೂ ಸ್ವಾಧೀನ ತಿದ್ದುಪಡಿ ಮಸೂದೆಗೆ ಸಂಬಂಧಿಸಿದಂತೆ ಒಂದೂವರೆ ವರ್ಷದಿಂದ ಟೀಕೆ, ಸಮರ್ಥನೆಗಳಲ್ಲೇ ಸಮಯ ವ್ಯರ್ಥವಾಗಿದೆ. ಈ ಗೊಂದಲ ನಮ್ಮ ರಾಜ್ಯದ ಮಟ್ಟಿಗೆ ಬಗೆ ಹರಿದಿದೆ. ಅದನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಗೊಳಿಸುವುದಷ್ಟೇ ಬಾಕಿ.

(ಸೌಜನ್ಯ : ಪ್ರಜಾವಾಣಿ)

Published & Owned by **C.P. Thammanna,** # 531, Vinaya Marga, 9th Cross, Siddhartha Nagara, Mysuru - 570011. and Printed at Annapurna Offset Printer, 511, 14th Main, Saraswathipuram, Mysore-570009. E-mail:jmrmysuru@yahoo.com Mob: 9620752999 Editor : **H.V. Venkatasubbarao**, Decl. No. : MAG91/2015-16